2		
	ಒಟ್ಟು	9680

ಬಿ ಓ ಟಿ ರಸ್ತೆ ತೊಂದರೆ

211(400) ಶ್ರೀ ಶಿವಲಿಂಗೇಗೌಡ ಕೆಎಂ:(ಅರಸೀಕೆರೆ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿಯಿಂದ ಹಾಸನಕ್ಕೆ B.O.T. ಆಧಾರದ ಮೇಲೆ ರಸ್ತೆ ಮಂಜೂರಾತಿ ಆಗಿದೆಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸಾರ್ವಜನಿಕರಿಗೆ ಆಗುತ್ತಿರುವ ಅನಾನುಕೂಲಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಸಿ ಎಂ ಉದಾಸಿ(ಲೋಕೋಪಯೋಗಿ ಸಚಿವರು):

ಅ) ಸರ್ಕಾರದ ಆದೇಶ ಸಂಖ್ಯೆ.ಲೋಇ 207 ಇಎಪಿ 2007, ದಿನಾಂಕ 06–12–2008ರಲ್ಲಿ ಕರಡು concession agreementಗೆ ಅನುಮೋದನೆ ನೀಡಲಾಗಿರುತ್ತದೆ.

ಆ) ಸರ್ಕಾರದಿಂದ ಅನುಮೋದನೆ ಪಡೆದು ಮೂರು ಬಾರಿ ಟೆಂಡರ್ ಆಹ್ವಾನಿಸಿದ್ದು, ಯಾವುದೇ ರಿಯಾಯಿತಿದಾರರು ಟೆಂಡರ್‌ನಲ್ಲಿ ಭಾಗವಹಿಸಿರುವುದಿಲ್ಲ. ಆದಾಗ್ಯೂ 4ನೇ ಟೆಂಡರ್‌ನ್ನು ಈಗಾಗಲೇ ಆಹ್ವಾನಿಸಿದ್ದು, ದಿನಾಂಕ 05–07–2010ರಂದು ಆಸಕ್ತಿವುಳ್ಳ ರಿಯಾಯಿತಿದಾರರು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕವೆಂದು ನಿಗಧಿಪಡಿಸಲಾಗಿರುತ್ತದೆ.

ಕಾಮಗಾರಿಗಳಿಗೆ ಹಣ ಪಾವತಿ

212(401) ಶ್ರೀ ಶಿವಲಿಂಗೇಗೌಡ ಕೆ ಎಂ:(ಅರಸೀಕೆರೆ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 12ನೇ ಹಣಕಾಸು ಯೋಜನೆಯಲ್ಲಿ ಬಾಕಿ ಎರುವ ಕಾಮಗಾರಿಗಳ ಬಿಲ್ಲಿನ ಮೊತ್ತ ಎಷ್ಟು?